
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ


06 ಡಿಸೆಂಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 264 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಇತ್ತೀಚೆಗೆ ಸೌದಿ ಅರೇಬಿಯಾದಲ್ಲಿ ನಡೆದ ರೆಡ್ ಸೀ ಚಲನ ಚಿತ್ರೋತ್ಸವದಲ್ಲಿ ಭಾಗಿಯಾದ ನಟಿ ಐಶ್ವರ್ಯ ರೈ ಅವರು ಕಪ್ಪು ಬಣ್ಣದ ಉಡುಗೆಯಲ್ಲಿ ಕಂಗೊಳಿಸಿದ ಕ್ಷಣ...



ಭಾರತಕ್ಕೆ ನಿರಂತರ ತೈಲ ಪೂರೈಕೆ ಮಾಡುವುದಾಗಿ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಶುಕ್ರವಾರ ಹೇಳಿದ್ದಾರೆ.



ನವದೆಹಲಿ: ಆರೋಗ್ಯಕ್ಕೆ ಹಾನಿಕಾರಕವೆಂದು ಪರಿಗಣಿಸಲಾಗಿರುವ ಪಾನ್ ಮಸಾಲಾದಂತಹ ಸರಕುಗಳ ಮೇಲೆ ಸೆಸ್ ವಿಧಿಸಲು ಅವಕಾಶ ನೀಡುವ ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ಮಸೂದೆ-2025 ಅನ್ನು ಶುಕ್ರವಾರ ಲೋಕಸಭೆಯು ಅಂಗೀಕರಿಸಿತು.

# ಇಂದು ಸಮರ್ಪಣಾ ಸಮಾವೇಶ

## 300 ಕೋ.ರೂ. ವೆಚ್ಚದ ಕಾಮಗಾರಿಗೆ ಸಿಎಂ, ಡಿಸಿಎಂ ಚಾಲನೆ | 76,273 ಫಲಾನುಭವಿಗಳಿಗೆ ಸೌಲಭ್ಯ ವಿತರಣೆ

• ಪ್ರಜೋದಯ ವರದಿ

**ಹಾಸನ:** ಪ್ರಗತಿ ಹಾದಿಯಲ್ಲಿ ಹಾಸನ, ಸರ್ಕಾರಿ ಸೇವೆಗಳ ಸಮರ್ಪಣಾ ಸಮಾವೇಶ ಶನಿವಾರ ನಗ ರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಆವರಣದಲ್ಲಿ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮ್ಯಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತು ವಾರಿ ಸಚಿವ ಕೃಷ್ಣಬೈರೇಗೌಡ ಸೇರಿ ಹಲವು ಸಚಿವರು ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಲಿದ್ದಾರೆ.

132 ಕೋ.ರೂ. ವೆಚ್ಚದ 21 ಕಾಮಗಾರಿಗಳ ಉದ್ಘಾಟನೆ, 166 ಕೋ.ರೂ. ವೆಚ್ಚದ 66 ಕಾಮಗಾರಿ ಗಳ ಶಂಕುಸ್ಥಾಪನೆ ನೆರವೇರಲಿದೆ. ಕಂದಾಯ ಇಲಾಖೆ ಇಲಾಖೆಯಿಂದ 24,025 ಫಲಾನುಭವಿ ಗಳಿಗೆ ದರಖಾಸ್ತು ಪೋಡಿ, 1,464 ಫಲಾನುಭವಿಗಳಿಗೆ ಕಂದಾಯ ಗ್ರಾಮಗಳ ಹಕ್ಕುಪತ್ರ ವಿತರಣೆ, 510 ಜನರಿಗೆ 94-ಸಿ ಹಕ್ಕುಪತ್ರ, 8,964 ಜನರಿಗೆ ಇ-ಪೌತಿ ಖಾತೆ ವಿತರಣೆ ನಡೆಯಲಿದೆ.

ಕೃಷಿ ಇಲಾಖೆಯಿಂದ 2,365 ಫಲಾನುಭವಿಗಳಿಗೆ ವಿವಿಧ ಸೌಲಭ್ಯ, ತೋಟಗಾರಿಕೆ ಇಲಾಖೆಯಿಂದ 2,154, ರೇಷ್ಮೆ ಇಲಾಖೆಯಿಂದ 347, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ 13,376, ಪಂಚಾಯತ್ ರಾಜ್, ಮಹಾನಗರ ಪಾಲಿಕೆ, ನಗರ ಸಭೆಯಿಂದ 19,620, ಪುರಸಭೆ, ಪಟ್ಟಣ ಪಂಚಾ ಯಿತಿಯಿಂದ 3,448 ಸೇರಿ ಒಟ್ಟು 76,273 ಫಲಾನು ಭವಿಗಳಿಗೆ ಸೌಲಭ್ಯಗಳನ್ನು ವಿತರಣೆ ಮಾಡಲಾ ಗುತ್ತದೆ.



**ಉದ್ಘಾಟನೆಗೊಳ್ಳಲಿರುವ ಕಾಮಗಾರಿ**

ಲೋಕೋಪಯೋಗಿ ಇಲಾಖೆಯಿಂದ 14 ಕೋ. ರೂ. ವೆಚ್ಚದಲ್ಲಿ ನಗರದಲ್ಲಿ ನಿರ್ಮಾಣಗೊಂಡಿರುವ ಪ್ರಜಾಸೌಧ ಕಟ್ಟಡ ಉದ್ಘಾಟನೆ, 4 ಕೋ.ರೂ. ವೆಚ್ಚ ದಲ್ಲಿ ನಿರ್ಮಾಣಗೊಂಡಿರುವ ಸಕ ಲೇಶಪುರ ತಾಲ್ಲೂಕು 2ನೇ ಹಂತದ ಪ್ರಜಾಸೌಧ ಮೊದಲ ಮತ್ತು 2ನೇ ಮಹಡಿ ಕಟ್ಟಡ, 14 ಕೋ. ರೂ. ವೆಚ್ಚದಲ್ಲಿ ಹಿಮ್ಸ್ ವೈದ್ಯರ ವಸತಿ ಗೃಹ, 28 ಕೋ.ರೂ. ವೆಚ್ಚದಲ್ಲಿ ಹಿಮ್ಸ್ ಬಾಲಕ, ಬಾಲಕಿಯರ ವಸತಿ ನಿಲಯ, ವೈದ್ಯಕೀಯ ಶಿಕ್ಷಣ ಇಲಾಖೆ ಯಿಂದ 11 ಕೋ.ರೂ. ವೆಚ್ಚದ ಗ್ರಂಥಾ ಲಯ, 24 ಕೋ. ರೂ. ವೆಚ್ಚದಲ್ಲಿ ಆಲೂರು ತಾಲ್ಲೂಕು ಪಾಳ್ಯ ಹೋಬಳಿ ಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ನಿಲಯ, ಹಳೇಬೀಡು ಪ್ರವಾಸ ಮಂದಿರ, ಆಲೂರು ಪಟ್ಟಣ ದಲ್ಲಿ ಅಗ್ನಿ ಶಾಮಕ ಠಾಣೆ, ಜಿಲ್ಲಾ ಕ್ರೀಡಾಂಗಣದಲ್ಲಿ ಹೊರಾಂಗಣ ಈಜುಕೊಳ, ಚನ್ನರಾಯಪಟ್ಟಣ, ಬೇಲೂರಿನಲ್ಲಿ ಸರ್ಕಾರಿ ಗೋಶಾಲೆ, ಜಾವಗಲ್, ಚನ್ನರಾಯಪಟ್ಟಣ ದಲ್ಲಿ ರೈತ ಸಂಪರ್ಕ ಕೇಂದ್ರ ಉದ್ಘಾಟನೆ ನೆರವೇ ರಲಿದೆ.

**ಶಂಕುಸ್ಥಾಪನೆ**

74 ಕೋ.ರೂ. ವೆಚ್ಚದಲ್ಲಿ ಮುದ್ದನಹಳ್ಳಿ ಗ್ರಾಮದ ಹತ್ತಿರ ನಾಗಮಂಗಲ ಶಾಲಾ ಕಾಲುವೆಯಿಂದ ನೀರನ್ನು ಎತ್ತಿ ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಹೋಬಳಿಯ 18 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಶಂಕುಸ್ಥಾಪನೆ ನಡೆಯಲಿದೆ. 9.5 ಕೋ.ರೂ. ವೆಚ್ಚದಲ್ಲಿ ಹಾಲುವಾಗಿಲು ಗ್ರಾಮ ದಲ್ಲಿ ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆ ಬೋಜನಾಲಯ ವಿಸ್ತರಣೆ, 17.38 ಕೋ.ರೂ. ವೆಚ್ಚದಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಕೋರೇನ ಹಳ್ಳಿಯಲ್ಲಿ ಇಂದಿರಾಗಾಂಧಿ ವಸತಿ ಶಾಲೆ ನಿರ್ಮಾಣ ಕಾಮಗಾರಿಕೆ ಚಾಲನೆ ದೊರೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಶುಕ್ರವಾರ ಬೆಳಿಗ್ಗೆ ಸಮಾವೇಶ ನಡೆ ಯುವ ವೇದಿಕೆಗೆ ಆಗಮಿಸಿ ಸಿದ್ಧತೆ ಪರಿಶೀಲನೆ ನಡೆಸಿದರು. ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ ಮತ್ತಿತರಿದ್ದರು. ಗಣ್ಯರ ಆಗಮನ ಹಿನ್ನಲೆ ಜಿಲ್ಲಾ ದ್ಯಂತ ಕಠಿಣ ಭದ್ರತಾ ಕ್ರಮ ಕೈಗೊಳ್ಳಲಾಗಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗು ಹಲವು ಸಚಿವರ ಆಗಮನದ ಹಿನ್ನಲೆ ನಗರದೆಲ್ಲೆಡೆ ಫ್ಲೆಕ್ಸ್‌ಗಳ ಆರ್ಭಟ ಹೆಚ್ಚಿದೆ.

## ಅಧಿಕಾರಿಗಳಿಗೆ ಹಣ ಸಂಗ್ರಹದ ಹೊಣೆಗಾರಿಕೆ

### 15 ಕೋ.ರೂ.ಗೂ ಹೆಚ್ಚು ಖರ್ಚು


• ಪ್ರಜೋದಯ ವರದಿ

ಹಾಸನ : ನಗರದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರು ಪಾಲ್ಗೊಳ್ಳ ಲಿರುವ ಸರ್ಕಾರಿ ಪ್ರಾಯೋಜಿತ ಸಮರ್ಪಣಾ ಸಮಾವೇಶಕ್ಕೆ ಭರದ ಸಿದ್ಧತೆಯೊಂದಿಗೆ 15 ಕೋ.ರೂಪಾಯಿಗೂ ಹೆಚ್ಚು ವ್ಯಯ ಮಾಡ ಲಾಗುತ್ತಿದೆ. ಈ ಹಣವನ್ನು ಅಧಿಕಾರಿ ವಲಯ, ಗುತ್ತಿಗೆದಾರರು ಮತ್ತಿತರ ಮೂಲ ಗಳಿಂದ ಸಂಗ್ರಹಿಸಲಾಗುತ್ತಿದೆ ಎಂಬ ಆರೋಪ ಎಲ್ಲೆಡೆ ಹರಿದಾಡುತ್ತಿದೆ.

ಸಮಾವೇಶದಲ್ಲಿ 70 ಸಾವಿರದಿಂದ 1 ಲಕ್ಷ ಜನರನ್ನು ಸೇರಿಸುವ ಪ್ರಯತ್ನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಭೈರೇಗೌಡ ಅವರು ಮುಂದಾಗಿದ್ದಾರೆ. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗು ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಮುಖಂಡರೊಡನೆ ಶುಕ್ರವಾರ ಸಮಾಲೋಚನೆ ಕೂಡ ನಡೆಸಿದ್ದಾರೆ. ಕಾರ್ಯಕ್ರಮದಲ್ಲಿ ಭಾಗಿಯಾಗುವ ಫಲಾನು ಭವಿಗಳು ಹಾಗು ಕಾರ್ಯಕರ್ತರಿಗೆ ಸುಮಾರು 8 ಕೋ.ರೂ.ವೆಚ್ಚದಲ್ಲಿ ವೇದಿಕೆ, ಉಪಾಹಾರ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದ್ದು, ಈ ಹಣವನ್ನು 25ಕ್ಕೂ ಹೆಚ್ಚು ಇಲಾಖೆಯ ಅಧಿಕಾರಿಗಳಲ್ಲದೆ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಆಯಾ ಕಟ್ಟಿನ ಸ್ಥಳಗಳಲ್ಲಿರುವ ಸಿಬ್ಬಂದಿಯ ಮೂಲಕ ಕ್ರೋಢೀಕರಿಸಲಾಗು ತ್ತಿದೆ ಎಂಬ ಚರ್ಚೆ ಅಧಿಕಾರಿ ವಲಯದಿಂದಲೇ ಕೇಳಿ ಬರುತ್ತಿದೆ.

ಸಮಾವೇಶದಲ್ಲಿ ಭಾಗಿಯಾಗುವ ಕಾಂಗ್ರೆಸ್ ಕಾರ್ಯಕರ್ತರು ಹಾಗು ವಾಹನಗಳಲ್ಲಿ ಕರೆ ತರುವ ಜನರಿಗೆ ತಲಾ 500 ರೂ.ನಂತೆ ಒಟ್ಟಾರೆ 3.5 ಕೋ.ರೂ.ಹಣವನ್ನು ಹೊಂದಿ ಸುವ ಜವಾಬ್ದಾರಿಯನ್ನು ಆಯ್ದ ಕಾಂಗ್ರೆಸ್ ಮುಖಂಡರಿಗೆ ವಹಿಸಲಾಗಿದೆ ಎಂಬ ಮಾಹಿತಿ ಗಳು ಹರಿದಾಡುತ್ತಿವೆ. ಈಗಾಗಲೇ ಪ್ರತಿಪಕ್ಷಗಳ ಮುಖಂಡರು ಹಣ ವಸೂಲಿಯ ಆರೋಪ ವನ್ನು ಮಾಡುತ್ತಿದ್ದರೆ, ಕಾಂಗ್ರೆಸ್‌ನ ಪ್ರಮು ಖರು ಅಲ್ಲಗಳೆಯುತ್ತಿದ್ದಾರೆ. ಜಿಲ್ಲಾಧಿಕಾರಿ ಕೂಡ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಆರೋಪವನ್ನು ತಳ್ಳಿ ಹಾಕಿದ್ದಾರೆ.

## ಹಾಸನಾಂಬ ದೇವಾಲಯ ಮಾರ್ಪಾಡಿಗೆ ಪರಿಶೀಲನೆ



• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನಕ್ಕೆ ಬರುವ ಭಕ್ತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಸುಗಮ ದರ್ಶನಕ್ಕಾಗಿ ದೇವಾಲಯವನ್ನು ಮಾರ್ಪಾ ಡುಗೊಳಿ ಸಲು ಏನೆಲ್ಲಾ ಕ್ರಮ ಕೈಗೊಳ್ಳಬಹುದೆಂಬ ಬಗ್ಗೆ ಚರ್ಚೆ ನಡೆಸಿದರು.

ಶುಕ್ರವಾರ ಹಾಸನಾಂಬ ದೇವಾಲಯಕ್ಕೆ ಭೇಟಿ ನೀಡಿ ಪ್ರಧಾನ ಅರ್ಚಕ ನಾಗರಾಜು, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ ಅವ ರೊಂದಿಗೆ ಮಾತುಕತೆ ನಡೆಸಿದರು. ಮುಂದಿನ ವರ್ಷ ಇನ್ನೂ ಹೆಚ್ಚಿನ ಭಕ್ತರು ಆಗಮಿಸುವ ನಿರೀಕ್ಷೆ ಯಲ್ಲಿ ದೇವಸ್ಥಾನದ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿದರು.

ಸುಗಮ ದರ್ಶನ ಕಲ್ಪಿಸಲು ಬಾಗಿಲುಗಳನ್ನು ವಿಸ್ತರಣೆ ಮಾಡಲು, ಪ್ರವೇಶ ದ್ವಾರದ ಮೆಟ್ಟಿಲುಗಳನ್ನು ಎತ್ತರ ಗೊಳಿಸುವ ನಿಟ್ಟಿನಲ್ಲಿ ಪರಿಶೀಲಿಸಿದರು. ಈ ಬಗ್ಗೆ ಅರ್ಚಕರು, ಅಧಿಕಾರಿಗಳು, ಇಂಜಿನೀಯರ್‌ಗಳ ಸಲಹೆ ಪಡೆದು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

## ರೇವಣ್ಣ ಗಾಳಿಯಲ್ಲಿ ಗುಂಡು ಹೊಡೆಯುವುದನ್ನು ಬಿಡಲಿ

### ಸಮಾವೇಶಕ್ಕೆ ಕೋಟಿ-ಕೋಟಿ ಹಣ ವಸೂಲಿ ಆರೋಪಕ್ಕೆ ಗೋಪಾಲಸ್ವಾಮಿ ತಿರುಗೇಟು

• ಪ್ರಜೋದಯ ವರದಿ



**ಹಾಸನ:** ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಅನಗತ್ಯ ಆರೋಪ ಮಾಡುವುದು ಸರಿಯಲ್ಲ. ಸಮಾವೇಶಕ್ಕೆ ವಿವಿಧ ಇಲಾಖೆಗಳಿಂದ ಕೋಟಿ-ಕೋಟಿ ಹಣ ವಸೂಲಿ ಮಾಡಲಾಗಿದೆ ಎಂಬುದಾಗಿ ಗಾಳಿಯಲ್ಲಿ ಗುಂಡು ಹೊಡೆಯು ವುದನ್ನು ಬಿಡಬೇಕೆಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರು ತಿರು ಗೇಟು ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ರೇವಣ್ಣ ಅವರು ಸಚಿವರಾಗಿದ್ದಾಗ ಜಿಲ್ಲೆಯಲ್ಲಿ ಹಲವು ಸರ್ಕಾರಿ ಕಾರ್ಯಕ್ರಮ ಆಯೋಜನೆ ಮಾಡ ಲಾಗಿತ್ತು. ಆ ವೇಳೆಯಲ್ಲೂ ಅವರು ಸರ್ಕಾರಿ ಇಲಾಖೆಗಳಿಂದ ಹಣ ವಸೂಲಿ ಮಾಡಿದ್ದಾ ರೆಯೇ ಎಂದು ಪ್ರಶ್ನಿಸಿದರು.

ರೇವಣ್ಣ ಮೊದಲು ಚೆನ್ನಾಗಿದ್ದರು. ಈಗ ಪೊಳ್ಳು ಮಾತನಾಡುವುದನ್ನು ಕಲಿತಿದ್ದಾರೆ. ಹುಡಾದಲ್ಲಿ 1 ಕೋ. ರೂ. ವಸೂಲಿ » ನಾಲ್ಕನೇ ಪುಟದಲ್ಲಿ

## ಹಾಸನ-ಶ್ರೀಕ್ಷೇತ್ರ ಆದಿಚುಂಚನಗಿರಿ ತಂಡ ಚಾಂಪಿಯನ್

### 28ನೇ ರಾಜ್ಯಮಟ್ಟದ ಆದಿಚುಂಚನಗಿರಿ ಕ್ರೀಡಾಕೂಟ ಯಶಸ್ವಿ | ಕ್ರೀಡಾಪಟುಗಳಿಗೆ ಚುಂಚಶ್ರೀಗಳಿಂದ ಬಹುಮಾನ ವಿತರಣೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕ್ರೀಡಾಂಗಣದಲ್ಲಿ ಮೂರು ದಿನಗಳ ಕಾಲ ನಡೆದ 28ನೇ ರಾಜ್ಯಮಟ್ಟದ ಆದಿಚುಂಚನಗಿರಿ ಕ್ರೀಡಾಕೂಟದಲ್ಲಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಬಾಲಕ-ಬಾಲಕಿಯರ ಸಮಗ್ರ ಗುಂಪು ಪಂದ್ಯಾವಳಿಯಲ್ಲಿ ಹಾಸನ ಜಿಲ್ಲೆ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಶ್ರೀಕ್ಷೇತ್ರ ಆದಿಚುಂಚನಗಿರಿ ಚಾಂಪಿ ಯನ್ ಆಗಿ ಹೊರಹುಮ್ಮಿದೆ.



ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಬಾಲಕ-ಬಾಲಕಿಯರ ಗುಂಪು ಆಟದಲ್ಲಿ ಹಾಸನ ಜಿಲ್ಲೆ ತಂಡ ಸಮಗ್ರ ಚಾಂಪಿ ಯನ್ ಪ್ರಶಸ್ತಿ ಪಡೆದುಕೊಂಡಿದೆ.

» ನಾಲ್ಕನೇ ಪುಟದಲ್ಲಿ





**"ವಿದ್ಯಾವಂತರಾಗಿ, ಸಂಘಟಿತರಾಗಿ ಮತ್ತು ಉತ್ತೇಜಿತರಾಗಿರಿ"**

-ಡಾ. ಬಿ.ಆರ್. ಅಂಬೇಡ್ಕರ್

ಸಂವಿಧಾನ ಶಿಲ್ಪಿ, ಭಾರತ ರತ್ನ, **ಬಾಬಾ ಸಾಹೇಬ ಡಾ. ಬಿ.ಆರ್. ಅಂಬೇಡ್ಕರ್** ರವರ

# 69ನೇ ಮಹಾಪರಿನಿರ್ವಾಣ ದಿನ

ಡಿಸೆಂಬರ್ 6, 2025, ಶನಿವಾರ ಬೆಳಿಗ್ಗೆ 10.00 ಗಂಟೆಗೆ

ಸ್ಥಳ: ವಿಧಾನಸೌಧದ ಮುಂಭಾಗ [ ಪೂರ್ವ ದ್ವಾರ ], ಬೆಂಗಳೂರು

## ಡಾ. ಬಿ.ಆರ್. ಅಂಬೇಡ್ಕರ್ ರವರ

## ಪ್ರತಿಮೆಗೆ ಮಾಲಾರ್ಪಣೆ ಮತ್ತು ಗೌರವ ಸಮರ್ಪಣೆ

| ಶ್ರೀ ಸಿದ್ದರಾಮಯ್ಯ | ಶ್ರೀ ಡಿ.ಕೆ. ಶಿವಕುಮಾರ್ | ಡಾ. ಹೆಚ್.ಸಿ. ಮಹದೇವಪ್ಪ |
|---|---|---|
| ಸನ್ಮಾನ್ಯ ಮುಖ್ಯಮಂತ್ರಿಗಳು | ಮಾನ್ಯ ಉಪ ಮುಖ್ಯಮಂತ್ರಿಗಳು | ಮಾನ್ಯ ಸಮಾಜ ಕಲ್ಯಾಣ ಸಚಿವರು |



**ಡಾ. ಹೆಚ್.ಸಿ. ಮಹದೇವಪ್ಪ**
ಮಾನ್ಯ ಸಮಾಜ ಕಲ್ಯಾಣ ಸಚಿವರು,
ಇಲಾಖೆಯ ಕಾರ್ಯಕ್ರಮಗಳ
ಪ್ರಗತಿ ಪರಿಶೀಲನೆ ನಡೆಸುತ್ತಿರುವುದು.



**ಸರ್ವರಿಗೂ ಆದರದ ಸುಸ್ವಾಗತ**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಬ್ರಾಹ್ಮಣ ಸಮುದಾಯ / ಹಿಂದುಳಿದ ವರ್ಗಗಳ ಮಾಲೀಕತ್ವದ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಉತ್ತಮ ಆಡಳಿತ ನಿಮಗಾಗಿ



# ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶ

## ಪ್ರಗತಿಯ ಪಥದಲ್ಲಿ ಹಾಸನ

**ಇಂದು ಬೆಳಿಗ್ಗೆ 11 ಗಂಟೆಗೆ, ಹಾಸನ**

ಕಂದಾಯ ಇಲಾಖೆಯ
**ದರಖಾಸ್ತು ಪೋಡಿ**, **ಪೌತಿ ಖಾತೆ**,
**ಕಂದಾಯ ಗ್ರಾಮ**, **94 ಸಿ ಹಕ್ಕು ಪತ್ರ**
ಮತ್ತು ವಿವಿಧ ಇಲಾಖೆಗಳ
ಸವಲತ್ತುಗಳ ವಿತರಣೆ

## ದಶಕಗಳ ರೈತರ ಕನಸು ನಮ್ಮ ಸರ್ಕಾರದಿಂದ ನನಸು

| 2018-23 (5 ವರ್ಷ) | 2025 (1 ವರ್ಷ) |
|---|---|
| **8,500** ರೈತರ ಪೋಡಿ ದುರಸ್ತಿ | **1,51,371** ರೈತರ ಪೋಡಿ ದುರಸ್ತಿ<br>**2,15,000** ಎಕರೆ ಮಂಜೂರಾದ ಭೂಮಿ<br>**12,84,714** ಫಲಾನುಭವಿಗಳಿಗೆ ಅನುಕೂಲ |

**ಹಾಸನ ಜಿಲ್ಲೆಯ 24,006 ರೈತರಿಗೆ ಪೋಡಿ ದುರಸ್ತಿ ಸಮರ್ಪಣೆ**

## ರೈತರ ಮಂಜೂರಿ ಜಮೀನಿಗೆ ಭೂ ಗ್ಯಾರಂಟಿ



ಜನ ಸೇವೆಯ ಸಮರ್ಪಣೆ

## ಕಂದಾಯ ಸೇವೆಗಳು ಈಗ ಸರಳ. ಸುಲಭ. ಸುಲಲಿತ.

## ರೇವಣ್ಣ ಗಾಳಿಯಲ್ಲಿ ಗುಂಡು ಹೊಡೆಯುವುದನ್ನು ಬಿಡಲಿ

» ಮೊದಲನೇ ಪುಟದಿಂದ

ಮಾಡಲು ಸಾಧ್ಯವೇ. ರೇವಣ್ಣ ಅವರು ಈವರೆಗೂ ಉಸ್ತುವಾರಿ ಸಚಿವರು ಜಿಲ್ಲೆಯಲ್ಲಿ ನಡೆಸಿದ ಯಾವುದೇ ಸಭೆ-ಸಮಾರಂಭಗಳಲ್ಲಿ ಭಾಗವಹಿಸಿಲ್ಲ. ಕ್ಷೇತ್ರದ ಜನರ ಬಗ್ಗೆ ಕಾಳಜಿ ಇದ್ದರೆ ಸಚಿವರನ್ನು ಭೇಟಿ ಮಾಡಬಹುದಾಗಿತ್ತು. ಜಿಲ್ಲೆಯಲ್ಲಿ ಅವರಿಗೆ ವ್ಯಾಪಾರ ಕಡಿಮೆಯಾಗಿದೆ. ಹಾಗಾಗಿ ನಮ್ಮ ಸರ್ಕಾರದ ವಿರುದ್ಧ ಪೊಳ್ಳು ಆರೋಪ ಮಾಡುತ್ತಿದ್ದಾರೆಂದು ಟೀಕಿಸಿದರು.

ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಏತ ನೀರಾವರಿ ಮೂಲಕ ದಿಡಗ ಭಾಗದ ಕೆರೆಗಳನ್ನು ತುಂಬಿಸುವ ಭರವಸೆ ನೀಡಿದ್ದರು. ಕೊಟ್ಟ ಮಾತಿನಂತೆ ಈಗ 74 ಕೋ. ರೂ. ವೆಚ್ಚದ ಯೋಜನೆಗೆ ಅನುಮೋದನೆ ನೀಡಿದ್ದಾರೆ. ದಿಡಗ ಹಾಗು ತುಮಕೂರು ಏತ ನೀರಾವರಿ ಯೋಜನೆಗೆ ಶನಿವಾರ ಶಂಕುಸ್ಥಾಪನೆ ಜೊತೆಗೆ ವಿವಿಧ ಇಲಾಖೆಗಳ ಫಲಾನುಭವಿಗಳಿಗೆ ಸರ್ಕಾರದ ಸೇವೆಗಳನ್ನು ಸಮರ್ಪಣೆ ಮಾಡಲಿದ್ದಾರೆಂದು ಹೇಳಿದರು.

ದಿಡಗ-ತುಮಕೂರು ಏತ ನೀರಾವರಿ ಯೋಜನೆಯಿಂದ ಚನ್ನರಾಯಪಟ್ಟಣ ತಾಲ್ಲೂಕಿಗೆ ಇನ್ನೂ ಶೇ.20 ಕ್ಕೂ ಹೆಚ್ಚು ನೀರಾವರಿ ಪ್ರದೇಶ ಹಿಗ್ಗಲಿದೆ. 32 ಗ್ರಾಮಗಳ ಜೊತೆಗೆ 18 ಕೆರೆಗಳು ತುಂಬಲಿವೆ. ಸಣ್ಣ ನೀರಾವರಿ ಇಲಾಖೆಗೆ 8 ಕೋ.ರೂ. ನೀಡಿದ್ದಾರೆ. ರಸ್ತೆಗೆ 50 ಕೋ.ರೂ. ಅನುದಾನ ಬಿಡುಗಡೆ ಮಾಡಿದ್ದಾರೆ. ಅಭಿವೃದ್ಧಿ ವಿಚಾರದಲ್ಲಿ ನಮ್ಮ ಸರ್ಕಾರ ತಾರತಮ್ಯ ಮಾಡಿಲ್ಲ. ಜಿಲ್ಲೆಯಲ್ಲಿ ಒಬ್ಬರೇ ಶಾಸಕರಿದ್ದರೂ, ಎಲ್ಲಾ ಕ್ಷೇತ್ರಗಳಿಗೂ ಅನುದಾನ ನೀಡಿದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 16 ಸಾವಿರ ಪ್ರಕರಣಗಳು ದುರಸ್ತಿ ಆಗಿವೆ. ಉಸ್ತುವಾರಿ ಸಚಿವರು ಕಳೆದ ತಿಂಗಳು ಜನಸಂಪರ್ಕ ಸಭೆ ಮಾಡಿದ್ದಾರೆ. ರಾಜಕೀಯ ಟೀಕೆ, ಟಿಪ್ಪಣಿ ಏನೇ ಇದ್ದರೂ, ನಮ್ಮ ಸರ್ಕಾರ ನೀರಾವರಿ ಯೋಜನೆಗೆ ಒತ್ತು ನೀಡಿದೆ ಎಂದು ತಿಳಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಒಳ್ಳೆಯ ಹುಡುಗ, ಅವರು ಹಾಗು ಅವರ ತಂದೆಯ ಬಗ್ಗೆ ಅಪಾರ ಗೌರವವಿದೆ. ಸ್ವರೂಪ್ ಅವರು ರೇವಣ್ಣ ಅವರ ಕೈಗೊಂಬೆಯಾಗಿ ಅವರು ಕೀ ಕೊಟ್ಟಾಗ ಮಾತ್ರ ನಮ್ಮ ಸರ್ಕಾರದ ವಿರುದ್ಧ ಟೀಕೆ ಮಾಡಿ ಸುಮ್ಮನಾಗುತ್ತಾರೆ ಎಂದರು.

ಚನ್ನರಾಯಪಟ್ಟಣ ಪ್ರಾಧಿಕಾರದ ಅಧ್ಯಕ್ಷ ಮೂರ್ತಿ, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಕಾಶ್ ಇದ್ದರು.

## ಹಾಸನ-ಶ್ರೀಕ್ಷೇತ್ರ ಆದಿಚುಂಚನಗಿರಿ ತಂಡ ಚಾಂಪಿಯನ್

» ಮೊದಲನೇ ಪುಟದಿಂದ

ಪ್ರಾಥಮಿಕ ಶಾಲಾ ವಿಭಾಗದಲ್ಲಿ ಬೆಂಗಳೂರು ತಂಡ ಚಾಂಪಿಯನ್ ಪ್ರಶಸ್ತಿಗೆ ಭಾಜನವಾಗಿದೆ.

**ಅಥ್ಲೆಟಿಕ್ಸ್ ಚಾಂಪಿಯನ್ಸ್**

ಅಥ್ಲೆಟಿಕ್ಸ್‌ನ ಹಿರಿಯ ಪ್ರಾಥಮಿಕ ಶಾಲಾ ಬಾಲಕರ ವಿಭಾಗದಲ್ಲಿ ಶ್ರೀ ಕ್ಷೇತ್ರ ಆದಿ ಚುಂಚನಗಿರಿ ವಿದ್ಯಾರ್ಥಿಗಳು 32 ಅಂಕ ಪಡೆಯುವ ಮೂಲಕ ಚಾಂಪಿಯನ್ ಪಟ್ಟ ಅಲಂಕರಿಸಿದರು. ಬಾಲಕಿಯರ ವಿಭಾಗದಲ್ಲಿ 34 ಅಂಕ ಪಡೆದು ಚಿಕ್ಕಬಳ್ಳಾಪುರ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು.

ಪ್ರೌಢಶಾಲಾ ವಿಭಾಗದಲ್ಲಿ ಅಥ್ಲೆಟಿಕ್ಸ್‌ನ ಬಾಲಕರ ವಿಭಾಗದಲ್ಲಿ 43 ಅಂಕ ಪಡೆದು ಬಿ.ಜಿ.ನಗರ, ಬಾಲಕಿಯರ ವಿಭಾಗದಲ್ಲಿ 66 ಅಂಕ ಪಡೆದು ಶ್ರೀ ಕ್ಷೇತ್ರ ಆದಿ ಚುಂಚನಗಿರಿ, ಪದವಿ ಪೂರ್ವ ಕಾಲೇಜು ವಿಭಾಗದಲ್ಲಿ 98 ಅಂಕ ಪಡೆದು ಶ್ರೀ ಕ್ಷೇತ್ರ ಆದಿ ಚುಂಚನಗಿರಿ ಚಾಂಪಿಯನ್ ಆಗಿ ಹೊರ ಹುಮ್ಮಿತು.

**ವೈಯಕ್ತಿಕ ಚಾಂಪಿಯನ್ಸ್**

ವೈಯಕ್ತಿಕ ಚಾಂಪಿಯನ್ಸ್‌ನಲ್ಲಿ ಪ್ರಾಥಮಿಕ ಶಾಲಾ ಬಾಲಕರ ವಿಭಾಗದಲ್ಲಿ ಕೋಲಾರದ ಹೇಮಾಂತ್ ಕುಮಾರ್, ಬಾಲಕಿಯರಲ್ಲಿ ಚಿಕ್ಕಬಳ್ಳಾಪುರ ಲಕ್ಷ್ಯ, ಪ್ರೌಢಶಾಲಾ ವಿಭಾಗ ಬಾಲಕರಲ್ಲಿ ಶ್ರೀ ಕ್ಷೇತ್ರ ಆದಿಚುಂಚನಗಿರಿಯ ಪೃಥ್ವಿ, ಬಾಲಕಿಯರಲ್ಲಿ ನಾಗರತ್ನಾ, ಕಾಲೇಜು ವಿಭಾಗದ ಬಾಲಕರ ವಿಭಾಗದಲ್ಲಿ ದಿನೇಶ್, ಬಾಲಕಿಯರಲ್ಲಿ ಧನುಶ್ರೀ ಹಾಗೂ ಪುಷ್ಪ ಅವರು ತಾಲಾ 15 ಅಂಕಗಳನ್ನು ಪಡೆದುಕೊಳ್ಳುವ ಮೂಲಕ ವೈಯಕ್ತಿಯ ಚಾಂಪಿಯನ್ ಪ್ರಶಸ್ತಿಗೆ ಭಾಜನರಾದರು. ವಿಜೇತ ಕ್ರೀಡಾಪಟುಗಳಿಗೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ



ಸ್ವಾಮೀಜಿ ಮತ್ತು ಹಾಸನ ಶಾಖಾ ಮಠದ ಶ್ರೀ ಶಂಭುನಾಥಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್ ಸೇರಿಗೆ ವಿವಿಧ ಮಠಾಧೀಶರು, ಗಣ್ಯರು ಪ್ರಶಸ್ತಿ, ಪಾರಿತೋಷಕಗಳನ್ನು ವಿತರಣೆ ಮಾಡಿದರು.

**ಕಬಡ್ಡಿ, ಖೋಖೋ, ವಾಲಿಬಾಲ್‌ನಲ್ಲಿ ಹಾಸನ ಪ್ರಥಮ**

19 ವರ್ಷದ ಬಾಲಕರ ವಿಭಾಗದ ಕಬಡ್ಡಿಯಲ್ಲಿ ಹಾಸನ ಪ್ರಥಮ, ರಾಮನಗರ ದ್ವಿತೀಯ ಸ್ಥಾನ ಪಡೆದುಕೊಂಡಿತು. ವಾಲಿಬಾಲ್‌ನಲ್ಲಿ ಹಾಸನ (ಪ್ರ), ಖೋ-ಖೋ ಹಾಸನ (ಪ್ರ), ಭದ್ರಾವತಿ (ದ್ವಿ), ಹ್ಯಾಂಡ್‌ಬಾಲ್‌ನಲ್ಲಿ ತುಮಕೂರು (ಪ್ರ), ರಾಮನಗರ (ದ್ವಿ), ಶಟಲ್ ಬ್ಯಾಡ್ಮಿಟನ್ ಶಿವಮೊಗ್ಗ (ಪ್ರ), ಮಂಡ್ಯ (ದ್ವಿ), ಡಾರ್ಜ್‌ಬಾಲ್‌ನಲ್ಲಿ ಆದಿಚುಂಚನಗಿರಿ (ಪ್ರ), ತುಮಕೂರು ದ್ವಿತೀಯ ಸ್ಥಾನ ಪಡೆದುಕೊಂಡಿದೆ.

19 ವರ್ಷದ ಬಾಲಕಿಯ ವಿಭಾಗದ ವಾಲಿಬಾಲ್‌ನಲ್ಲಿ ಹಾಸನ ಪ್ರಥಮ, ರಾಮನಗರ ದ್ವಿತೀಯ, ಖೋ-ಖೋ ಹಾಸನ ಪ್ರಥಮ, ಡಾರ್ಜ್‌ಬಾಲ್ ಆದಿಚುಂಚನಗಿರಿ ಪ್ರಥಮ, ಚಿಕ್ಕಬಳ್ಳಾಪುರ ದ್ವಿತೀಯ, ಶಟಲ್ ಬ್ಯಾಡ್ಮಿಟನ್ ಶಿವಮೊಗ್ಗ ಪ್ರಥಮ, ಬಿ.ಜಿ.ನಗರ ದ್ವಿತೀಯ, ಕಬಡ್ಡಿಯಲ್ಲಿ ಮಂಡ್ಯ (ಪ್ರ), ಶಿವಮೊಗ್ಗ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿದೆ. 14 ವರ್ಷದ ಬಾಲಕರ ವಿಭಾಗದ ಕಬಡ್ಡಿಯಲ್ಲಿ ಮೈಸೂರು ಪ್ರಥಮ, ತುಮಕೂರು ದ್ವಿತೀಯ, ಬಾಲಕಿಯರ ವಿಭಾಗದ ಕಬಡ್ಡಿಯಲ್ಲಿ ಹಾಸನ ಪ್ರಥಮ, ಮೈಸೂರು ದ್ವಿತೀಯ ಸ್ಥಾನ ಪಡೆದುಕೊಂಡಿತು.

**ಅದ್ದೂರಿ ಯಶಸ್ಸು ಕಂಡ ಕ್ರೀಡಾಕೂಟ**

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟ ಆದಿಚುಂಚನಗಿರಿ ಕ್ರೀಡಾಕೂಟ ಅತ್ಯಂತ ಯಶಸ್ವಿಗೆ ಸಾಕ್ಷಿಯಾಯಿತು. 3 ದಿನಗಳ ಕಾಲ ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಕ್ರೀಡಾಪಟುಗಳು, ವಿದ್ಯಾರ್ಥಿಗಳು, ಶಿಕ್ಷಕರಿಗೆ ಉತ್ತಮ ಊಟ, ವಸತಿ ಜೊತೆಗೆ ತಾಂತ್ರಿಕವಾಗಿ, ನಿಯಮಬದ್ಧವಾಗಿ ನಡೆದ ಕ್ರೀಡಾಕೂಟಕ್ಕೆ ಹಲವು ಗಣ್ಯರು ಮೆಚ್ಚಿಗೆ ವ್ಯಕ್ತಪಡಿಸಿದರು. ಅಚ್ಚುಕಟ್ಟಿನ ನಿರ್ವಹಣೆ ಜವಾಬ್ದಾರಿ ಹೊತ್ತಿದ್ದ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರ ಶ್ರಮಕ್ಕೆ ಪ್ರಶಂಸೆಗಳು ವ್ಯಕ್ತವಾದವು. ಸಮಾರೋಪ ಸಮಾರಂಭದಲ್ಲಿ ಚಿತ್ರದುರ್ಗ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಶ್ರೀ ಶಿವಲಿಂಗಾನಂದ ಸ್ವಾಮೀಜಿ, ಶ್ರೀ ಚಂದ್ರಶೇಖರನಾಥ ಸ್ವಾಮೀಜಿ, ಶ್ರೀ ಶಿವಪುತ್ರಸ್ವಾಮೀಜಿ ಸೇರಿ ಹಲವರು ಭಾಗವಹಿಸಿದ್ದರು.

**ಹಾಸನ:** ನಗರದ ಎಸ್ ಎಸ್‌ಎಂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನೂತನ ನವೀಕೃತ ಮಾತೃತ್ವ ಘಟಕವನ್ನು ಶಾಸಕ ಹೆಚ್.ಪಿ.ಸ್ವರೂಪ್ ಅವರು ಶುಕ್ರವಾರ ಉದ್ಘಾಟಿಸಿದರು. ಆಸ್ಪತ್ರೆಯ ನಿರ್ದೇಶಕಿ ಡಾ||ಹೆಚ್.ಆರ್. ಸೌಮ್ಯದಿನೇಶ್, ಪ್ರಸೂತಿ ತಜ್ಞೆ ಡಾ||ವಿದ್ಯಾಶ್ರೀ, ಆಸ್ಪತ್ರೆಯ ಕಾರ್ಯ ನಿರ್ವಹಣಾಧಿಕಾರಿ ದಿಲೀಪ್, ಡಾ||ವಿನಾಯಕ, ಡಾ||ದಿವ್ಯಾ ಉಪಸ್ಥಿತರಿದ್ದರು.






## ಕ್ರಮಕ್ಕೈಗೊಳ್ಳದಿದ್ದರೆ ಆಮರಾಣಾಂತ ಉಪವಾಸದ ಎಚ್ಚರಿಕೆ
## ನಿವೇಶನ ನೀಡುವಂತೆ ಬೀರನಹಳ್ಳಿಕೆರೆ ಸಂತ್ರಸ್ತರ ಆಗ್ರಹ

• ಪ್ರಜೋದಯ ವರದಿ

**ಹಾಸನ:** ರಾಜಕೀಯ ದ್ವೇಷಕ್ಕೆ ಬಲಿಯಾದ ಬೀರನಹಳ್ಳಿ ಕೆರೆ ಬಡವರಿಗೆ ನಿವೇಶನ ನೀಡಲು ಕ್ರಮಕ್ಕೈಗೊಳ್ಳದಿದ್ದರೆ ಆಮರಾಣಾಂತ ಉಪವಾಸ ಮಾಡಲು ತೀರ್ಮಾನಿಸಿದ್ದೇವೆಂದು ಮನೆ ಕಳೆದುಕೊಂಡ ಸಂತ್ರಸ್ತರು ಎಚ್ಚರಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸಂತ್ರಸ್ತೆ ಕಮಲಾ ಅವರು ಮಾತನಾಡಿ, ಬೀರನಹಳ್ಳಿ ಕೆರೆ ಅಂಗಳದಲ್ಲಿ ಮನೆ ನಿರ್ಮಿಸಿಕೊಂಡು ವಾಸವಾಗಿದ್ದ 75 ಮನೆಗಳ ಕುಟುಂಬಗಳು ಬೀದಿ ಪಾಲಾಗಿದೆ. 2007ರ ಮೇ 11 ರಂದು ನಮ್ಮ ಬದುಕಿನ ಕರಾಳ ದಿನ. ಅಂದು ಜಿಲ್ಲಾಡಳಿತ ಪೊಲೀಸ್ ಭದ್ರತೆ ನಡುವೆ ಜೆಸಿಬಿ ಮೂಲಕ ನಮ್ಮ ಮನೆಗಳ ಸುಧಾರಣೆ ಹೆಸರಿನಲ್ಲಿ ಜಿಲ್ಲಾಡಳಿತ ನೆಲಸಮಗೊಳಿಸಿತು ಎಂದು ಅಳಲು ತೋಡಿಕೊಂಡರು.

ಅಧಿಕಾರಿಗಳ ಕಠೋರ ಕ್ರಮದಿಂದ 75 ಬಡ ಕುಟುಂಬಗಳ ಮನೆಗಳನ್ನು ನೆಲಸಮಗೊಳಿಸ ಲಾಗಿದೆ. ಅಂದಿನ ಕಣ್ಣೀರು, ಆಕ್ರಂದನಕ್ಕೆ ಯಾರೂ ಕರುಣೆ ತೋರಲಿಲ್ಲ. ನಂತರ ಅಂದಿನ ಶಾಸಕ ಹಾಗು ಆಶ್ರಯ ಸಮಿತಿ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್ ಅವರು 66 ಫಲಾನುಭವಿಗಳನ್ನು ಆಯ್ಕೆ ಮಾಡಿ ಕೃಷ್ಣನಗರದಲ್ಲಿ ನಿವೇಶನ ನೀಡಲು ಹಕ್ಕುಪತ್ರ ವಿತರಿಸಿದ್ದರು. ಹಕ್ಕುಪತ್ರ ಕೊಟ್ಟ ನಂತರ ಹಿಂತೆಗೆತವಾಗಿದೆ. ಹಕ್ಕುಪತ್ರ ನೀಡಿದರೂ ಕೃಷ್ಣನಗರದಲ್ಲಿ ಆಶ್ರಯ ಯೋಜನೆ ಅಡಿ ನಿವೇಶನ ಕೊಡಲು ಸಾಧ್ಯವಿಲ್ಲವೆಂದು ನಗರಾಭಿವೃದ್ಧಿ ಪ್ರಾಧಿಕಾರ ತಿರಸ್ಕರಿಸಿದೆ ಎಂದು ದೂರಿದರು.

ಬೀರನಹಳ್ಳಿ ಕೆರೆಗೆ ಮನೆಗಳನ್ನು ಕಳೆದುಕೊಂಡ ಕುಟುಂಬಗಳು 18 ವರ್ಷಗಳಿಂದ ಬೀದಿ ಬದಿಯಲ್ಲಿ, ಬಾಡಿಗೆ ಮನೆಗಳಲ್ಲಿ, ಸಂಕಷ್ಟದಲ್ಲಿ ಬದುಕುತ್ತಿದ್ದೇವೆ.ನಿವೇಶನಕ್ಕಾಗಿ ರಾಜಕಾರಣಿಗಳ, ಅಧಿಕಾರಿಗಳ, ಕಚೇರಿಗಳ ಬಾಗಿಲು ತಟ್ಟಿದರೂ ನ್ಯಾಯ ಸಿಗಲಿಲ್ಲ. ನಮ್ಮ ಮನೆ ನೆಲಸಮ ಮಾಡಿದ ಜಾಗ ಹಾಗೆಯೇ ಇದ್ದು ಯಾವುದೇ ಅಭಿವೃದ್ಧಿಯಾಗಿಲ್ಲ. ಹಾಗಿದರೆ ಯಾವ ಕಾರಣಕ್ಕೆ ತೆರವು ಮಾಡಿದರು ಎಂದು ಪ್ರಶ್ನಿಸಿದರು.

ಹಲವು ಬಾರಿ ಮನವಿ ಕೊಟ್ಟರೂ ಯಾವ ಪ್ರಯೋಜನವೂ ಆಗಿಲ್ಲ. ಜಿಲ್ಲಾಧಿಕಾರಿ, ಮುಖ್ಯಮಂತ್ರಿ ಕಾರ್ಯಾಲಯ, ವಸತಿ ಸಚಿವಾಲಯ, ಜಿಲ್ಲಾ ಉಸ್ತುವಾರಿ ಸಚಿವರ ಜನಸ್ಪಂದನ ಸಭೆ, ಎಲ್ಲೆಡೆ ಮನವಿ ಸಲ್ಲಿಸಿದರೂ ಸ್ಪಂದನೆ ಇಲ್ಲ. ಇದೀಗ ಅಂತಿಮ ಹೋರಾಟ ಆಮರಾಣಾಂತ ಉಪವಾಸ ಮಾಡಲು ನಿರ್ಧಾರ ಮಾಡಲಾಗಿದೆ. ಎಲ್ಲಾ 75 ಕುಟುಂಬ ಗಳು ಜಿಲ್ಲಾಧಿಕಾರಿ ಕಚೇರಿ ಎದುರು ಆಮರಾಣಾಂತ ಉಪವಾಸ ಸತ್ಯಾ ಗ್ರಹ ಮಾಡಲು ನಿರ್ಧರಿಸಿದ್ದೇವೆ ಎಂದರು.ಗೌರಮ್ಮ, ಜಯಲಕ್ಷ್ಮಿ, ಮೀನಾಕ್ಷಿ, ಹೇಮಾ, ಪುಷ್ಪಾವತಿ, ಗಂಗಾಧರ್ ಇದ್ದರು.

## ಹೇಮಾವತಿ ಬೃಂದಾವನ ನಿರ್ಮಾಣಕ್ಕೆ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಗೊರೂರು ಹೇಮಾವತಿ ಅಣೆಕಟ್ಟೆ ತಳಭಾಗದಲ್ಲಿರುವ 530 ಎಕರೆ ಪಾಳು ಪ್ರದೇಶದಲ್ಲಿ ಹೇಮಾವತಿ ಬೃಂದಾವನ ನಿರ್ಮಿಸಲು ಸರ್ಕಾರ ದಿಂದ 200 ಕೋಟಿ ರೂ. ಅನುದಾನ ನೀಡುವಂತೆ ಗೊರೂರು ಹೇಮಾವತಿ ಬೃಂದಾವನ ನಿರ್ಮಾಣ ಹೋರಾಟ ಹಾಗು ಮೂಲಭೂತ ಸೌಕರ್ಯ ಅಭಿವೃದ್ಧಿ ಸಮಿತಿ ಗೌರವಾಧ್ಯಕ್ಷ ಜಿ.ಆರ್. ಹೇಮರಾಜು ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಹೇಮಾವತಿ ಜಲಾಶಯ ಯೋಜನೆ ಆರಂಭವಾಗಿ 60 ವರ್ಷಗಳಾದರೂ,ಅಣೆಕಟ್ಟಿನ ಮುಂಭಾಗ ಹಾಗು ಹಿನ್ನಿರಿಗೆ ಬಳಸಿ ಸರ್ಕಾರ ಸ್ವಾಧೀನ ಪಡಿಸಿಕೊಂಡ 750 ಎಕರೆ ಭೂಮಿಯಲ್ಲಿ ಯಾವುದೇ ಅಭಿ ವೃದ್ಧಿ ಕಾರ್ಯಗಳು ಜರುಗದಿರುವುದು ಸ್ಥಳೀಯರಲ್ಲಿ ಅಸಮಾಧಾನ ಮೂಡಿ ಸಿದೆ ಎಂದರು.

ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಹೊಸ ಚೈತನ್ಯ ತುಂಬುವ ಉದ್ದೇಶಕ್ಕಾಗಿ ಹೇಮಾವತಿ ಜಲಾಶಯ ಯೋಜನಾ ಕಚೇರಿ ಎದುರು ಜನರು ಶಾಂತಿಯುತ ಪ್ರತಿಭಟನೆ ನಡೆಸಿ ಸರ್ಕಾರ ತಕ್ಷಣ ಕ್ರಮಕ್ಕೆ ಬರಬೇಕೆಂದು ಒತ್ತಾಯಿಸ ಲಾಗಿತ್ತು. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಜಿಲ್ಲೆಯ ಹೆಮ್ಮೆಯ ತಾಣ ವಾಗಬೇಕಾದ ಗೊರೂರು ಅಣೆಕಟ್ಟಿನ ಸೌಂದರ್ಯ ಹಾಳಾಗಿರು ವುದು ಬೇಸರ ತರಿಸಿದೆ ಎಂದು ಹೇಳಿದರು.

ಕೆಆರ್‌ಎಸ್ ಬೃಂದಾವನ ಮಾದರಿಯಲ್ಲಿ ಇಲ್ಲಿ ಪ್ರವಾಸೋದ್ಯಮ ಕೇಂದ್ರ, ಉದ್ಯಾನವನ, ಸಂಗೀತ ಕಾರಂಜಿ, ಸಸ್ಯೋದ್ಯಾನ, ಪಾದಚಾರಿ ಮಾರ್ಗ, ಮಿನಿ ಅಕ್ವೇರಿಯಂ, ಮಕ್ಕಳ ಉದ್ಯಾನ, ಪ್ರಕೃತಿ ಸಂಗ್ರಹಾಲಯ ಮುಂತಾದ ಸೌಲಭ್ಯಗಳೊಂದಿಗೆ ಹೇಮಾವತಿ ಬೃಂದಾವನ ಅಭಿವೃದ್ಧಿ ಮಾಡಿದಲ್ಲಿ ಹಾಸನ ಜಿಲ್ಲೆಯ ಆಕರ್ಷಣೆಗೊಳ್ಳಲಿದೆ.

ಈ ಯೋಜನೆ ಜಾರಿಗೆ ಬಂದರೆ ಸ್ಥಳೀಯರಿಗೆ ಉದ್ಯೋಗಾವಕಾಶ, ವ್ಯಾಪಾರಸ್ಥರಿಗೆ ಚಟುವಟಿಕೆ, ಜಿಲ್ಲೆಗೆ ಪ್ರವಾಸಿಗರ ಪ್ರವಾಹ ಮತ್ತು ಐತಿಹಾಸಿಕ ಪ್ರದೇಶಕ್ಕೆ ಹೊಸ ಚೈತನ್ಯ ಸಿಗಲಿದೆ ಎಂದು ನಿರೀಕ್ಷೆ ವ್ಯಕ್ತಪಡಿಸಿದರು. ಸಮಿತಿ ಅಧ್ಯಕ್ಷ ನಿಂಗರಾಜು, ಉಪಾ ಧ್ಯಕ್ಷ ಮಲ್ಲೇಶ್, ಆನಂದ್, ಜಯಂತ್ ಇದ್ದರು.




ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK